# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ಇವರು ನಿಯಮ-72ರಡಿ ಸದನದಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.

**ಸೂಚನೆ:-**

ಈ ಹಿಂದಿನ ಬಿ.ಜೆ.ಪಿ ಸರ್ಕಾರದ ಅವಧಿಯಲ್ಲಿ ಪ್ರತಿ ಜಿಲ್ಲೆಯಲ್ಲಿ ಸರ್ಕಾರಿ ಗೋಶಾಲೆಗಳನ್ನು ಸ್ಥಾಪಿಸಿ ಪ್ರತಿಯೊಂದಕ್ಕೂ ರೂ.2 ಕೋಟಿ ಅನುದಾನ ನೀಡಲಾಗಿತ್ತು. ಆದರೆ ನಂತರದ ಕಾಂಗ್ರೆಸ್ ಸರ್ಕಾರ ಈ ಯೋಜನೆಯನ್ನು ನಿರ್ಲಕ್ಷ್ಯ ಮಾಡಿದ ಪರಿಣಾಮ ಇಂದು ಚಿಕ್ಕಮಗಳೂರು ಮತ್ತು ಚಿಕ್ಕಬಾಣಾವರ ಹೊರತುಪಡಿಸಿ ಉಳಿದ ಸರ್ಕಾರಿ ಗೋಶಾಲೆಗಳು ಮುಚ್ಚಲ್ಪಟ್ಟಿವೆ. ರಾಜ್ಯದಲ್ಲಿ 227 ಖಾಸಗಿ ಗೋಶಾಲೆಗಳಲ್ಲಿ ಸುಮಾರು 33 ಸಾವಿರ ಗೋವುಗಳಿದ್ದು, ಸರ್ಕಾರಿ ಗೋಶಾಲೆಯ ಗೋವಿಗೆ ಪ್ರತಿದಿನ ರೂ.79 ಅನುದಾನ ಸಿಗುತ್ತಿದ್ದರೆ, ಖಾಸಗಿ ಗೋಶಾಲೆಯ ಗೋವಿಗೆ ಕೇವಲ ರೂ.17.50 ಮಾತ್ರ, ಅದೂ 100 ದಿನಗಳಿಗೆ ಮಾತ್ರ ನಿಗದಿಯಾಗಿದೆ. ಕಳೆದ ಎರಡು ವರ್ಷಗಳಿಂದ ಈ ಅಲ್ಪ ಅನುದಾನವೂ ಬಿಡುಗಡೆಯಾಗಿಲ್ಲ. ಗೋ ರಕ್ಷಣೆ ಕಾಯ್ದೆಯ ಜಾರಿಯಲ್ಲೂ ನಿರ್ಲಕ್ಷ್ಯ ವಹಿಸಲಾಗಿದ್ದು, ವಶಪಡಿಸಿದ ಗೋವುಗಳನ್ನು ಗೋಶಾಲೆಗೆ ಸಾಗಿಸಲು ಸರ್ಕಾರದಿಂದ ಯಾವುದೇ ಸಾರಿಗೆ ವೆಚ್ಚ ಭರಿಸಲಾಗುತ್ತಿಲ್ಲ.

ಹಾಲು ಉತ್ಪಾದನೆಗೆ ಮಾತ್ರ ಒತ್ತು ನೀಡಲಾಗುತ್ತಿದ್ದು, ಬರಡು ಹಾಗೂ ವಯಸ್ಸಾದ ದನಗಳ ರಕ್ಷಣೆಗೆ ಯಾವುದೇ ಸಮರ್ಪಕ ನೀತಿ ಇಲ್ಲದಿರುವುದು ಆತಂಕಕಾರಿ ವಿಷಯವಾಗಿದೆ. ಹಾಲು ಉತ್ಪಾದನೆಯಲ್ಲಿ ದೇಶದಲ್ಲಿ ಎರಡನೇ ಸ್ಥಾನದಲ್ಲಿರುವ ಕರ್ನಾಟಕವು ಗೋಶಾಲೆ ನಿರ್ವಹಣೆಯಲ್ಲೂ ಮುಂಚೂಣಿಯಲ್ಲಿ ನಿಲ್ಲಬೇಕಾಗಿದೆ. ಮಾರಾಟವಾಗುವ ಹಾಲಿನ ಪ್ರತಿ ಲೀಟರಿನ ಆದಾಯದಲ್ಲಿ ಕನಿಷ್ಠ 10 ಪೈಸೆಯನ್ನು ಬರಡು ದನಗಳ ರಕ್ಷಣೆಗೆ ಮೀಸಲಿಟ್ಟರೆ ಗೋಶಾಲೆಗಳನ್ನು ಸಮರ್ಪಕವಾಗಿ ನಡೆಸಲು ಸಾಧ್ಯ. ವೃದ್ಧ ತಂದೆ-ತಾಯಿಗಳನ್ನು ಕೈಬಿಡದಂತೆ ವಯಸ್ಸಾದ ಹಸುವನ್ನೂ ಬೀದಿಗೆ ತಳ್ಳಬಾರದು ಎಂಬ ಮಾನವೀಯ ದೃಷ್ಟಿಕೋನದಿಂದ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರ ಗಮನಕ್ಕೆ ತರ ಬಯಸುತ್ತೇನೆ.

**ಹೇಳಿಕೆ :-**

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ 2020 ಜಾರಿಯಾದ ನಂತರ ರೈತರು ಸಾಕಲಾಗದ, ವಯಸ್ಸಾದ, ನಿರ್ಗತಿಕ, ಅನಾರೋಗ್ಯದಿಂದ ಬಳಲುತ್ತಿರುವ, ಅನಧಿಕೃತ ಜಾನುವಾರುಗಳ ಸಾಗಾಣಿಕೆಯಲ್ಲಿ ವಶಪಡಿಸಿಕೊಂಡ ಹಾಗೂ ಬಿಡಾಡಿ ಜಾನುವಾರುಗಳನ್ನು ನಿರ್ವಹಣೆ ಮಾಡಲು ಜಿಲ್ಲೆಗೊಂದರಂತೆ 30 ಗೋಶಾಲೆಯನ್ನು ಸ್ಥಾಪಿಸಲು 2021-22ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಯಿತು. ಅದರಂತೆ ಪ್ರತಿ ಜಿಲ್ಲೆಯಲ್ಲಿ ರೂ.1.00 ಕೋಟಿ ಅನುದಾನದಲ್ಲಿ ಒಂದು ಸರಕಾರಿ ಗೋಶಾಲೆಯನ್ನು ಸ್ಥಾಪಿಸಲು ಒಟ್ಟು ರೂ.30.00 ಕೋಟಿ ಅನುದಾನ ನೀಡಲಾಗಿದೆ. (ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ).

ರಾಜ್ಯದ 30 ಜಿಲ್ಲೆಗಳಲ್ಲಿ ಸರಕಾರಿ ಗೋಶಾಲೆಗಳು ಕಾರ್ಯನಿರ್ವಹಿಸುತ್ತಿವೆ. 30 ಗೋಶಾಲೆಗಳ ಪೈಕಿ 22 ಜಿಲ್ಲೆಗಳ ಗೋಶಾಲೆಗಳಲ್ಲಿ 1352 ಜಾನುವಾರುಗಳನ್ನು ಸೇರ್ಪಡೆಯಾಗಿದ್ದು, ಅವುಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ಉಳಿದ 8 ಜಿಲ್ಲೆಗಳ ಸರ್ಕಾರಿ ಗೋಶಾಲೆಗಳಲ್ಲಿ ಜಾನುವಾರುಗಳು ಸೇರ್ಪಡೆಯಾಗಿರುವುದಿಲ್ಲ, ಸೇರ್ಪಡೆಯಾದಲ್ಲಿ ಅವುಗಳನ್ನು ನಿರ್ವಹಣೆ ಮಾಡಲಾಗುವುದು.

ಸರ್ಕಾರಿ ಗೋಶಾಲೆಗಳಲ್ಲಿರುವ ಜಾನುವಾರುಗಳ ನಿರ್ವಹಣೆಗೆ ಪ್ರತಿ ಜಾನುವಾರುವಿಗೆ ಪ್ರತಿ ದಿನಕ್ಕೆ ರೂ.80.00 ರಂತೆ NDRF Norms ಪ್ರಕಾರ ನಿರ್ವಹಣಾ ವೆಚ್ಚವನ್ನು ಹಾಗೂ ಕಾರ್ಮಿಕರ ವೇತನ ಹಾಗೂ ಇತರ ಗೋಶಾಲೆಯ ವೆಚ್ಚವನ್ನು ಭರಿಸಲಾಗುತ್ತಿದೆ.

2025-26ನೇ ಸಾಲಿನ ಡಿಸೆಂಬರ್-2025ರ ಮಾಹೆಯವರೆಗೆ ಸರ್ಕಾರಿ ಗೋಶಾಲೆಗಳಲ್ಲಿರುವ ಜಾನುವಾರುಗಳ ನಿರ್ವಹಣೆಗೆ ರೂ.2.09 **ಕೋಟಿ** ಅನುದಾನವನ್ನು ನೀಡಲಾಗಿದೆ. ಜಿಲ್ಲೆಗಳ ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ರವರುಗಳು ಸಲ್ಲಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅಂಟನ ಲಭ್ಯತೆಗೆ ಅನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಗೋಶಾಲೆಗಳಲ್ಲಿರುವ ಜಾನುವಾರುಗಳ ನಿರ್ವಹಣೆಗೆ ನಿಯಮಿತವಾಗಿ ಅನುದಾನ ನೀಡಲಾಗುತ್ತಿದೆ. ಈ ಗೋಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಅದರೊಂದಿಗೆ ಮೇವು ಕತ್ತರಿಸುವ ಯಂತ್ರ ಜಾನುವಾರುಗಳನ್ನು ಎತ್ತುವ ಯಂತ್ರಗಳನ್ನು ಅಳವಡಿಸಲಾಗಿದೆ. ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಗೋಶಾಲೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ

ರಾಜ್ಯದ 31 ಜಿಲ್ಲೆಗಳಲ್ಲಿ ಪ್ರಸ್ತುತ 256 ಖಾಸಗಿ ಗೋಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ಒಟ್ಟು 49873 ಜಾನುವಾರುಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ಖಾಸಗಿ ಗೋಶಾಲೆಗಳಲ್ಲಿನ ಕನಿಷ್ಠ 50 ಹಾಗೂ ಗರಿಷ್ಠ 200 ಜಾನುವಾರುಗಳ ನಿರ್ವಹಣೆಗೆ ಪ್ರತಿ ದಿನಕ್ಕೆ ಪ್ರತಿ ಜಾನುವಾರಿಗೆ ರೂ.17.50 ರಂತೆ ಗೋಶಾಲೆಗಳಿಗೆ ಸಹಾಯನುದಾನ ನೀಡಲು ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಪ್ರಾಣಿ ದಯಾ ಸಂಘ ಶಿಫಾರಸ್ಸಿನೊಂದಿಗೆ ಸಲ್ಲಿಸಲಾಗುವ ಪ್ರಸ್ತಾವನೆಗಳಿಗೆ ನಿಯಮಾನುಸಾರ ಸಹಾಯಾನುದಾನ ನೀಡಲು ಅವಕಾಶ ಇರುತ್ತದೆ.

ಅದರಂತೆ 2025-26ನೇ ಸಾಲಿನ ಡಿಸೆಂಬರ್-2025ರ ಮಾಹೆಯವೆಗೆ ರಾಜ್ಯದ ಒಟ್ಟು 19 ಜಿಲ್ಲೆಗಳಿಂದ 111 ಖಾಸಗಿ ಗೋಶಾಲೆಗಳಲ್ಲಿರುವ ಜಾನುವಾರುಗಳ ನಿರ್ವಹಣೆಗೆ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಪ್ರಾಣಿ ದಯಾ ಸಂಘದ ಶಿಫಾರಸ್ಸಿನೊಂದಿಗೆ ಸಲ್ಲಿಕೆಯಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅಂಟನ ಲಭ್ಯತೆಗೆ ಅನುಗುಣವಾಗಿ 15146 ಜಾನುವಾರುಗಳ ನಿರ್ವಹಣೆಗೆ ರೂ.1.33 **ಕೋಟಿ** ಸಹಾಯಾನುದಾನವನ್ನು ಬಿಡುಗಡೆ ಮಾಡಲಾಗಿದೆ. ಇನ್ನು ಮುಂದೆ ಸಲ್ಲಿಕೆಯಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅಂಟನ ಲಭ್ಯತೆಗೆ ಅನುಗುಣವಾಗಿ ಸಹಾಯಾನುದಾನವನ್ನು ಬಿಡುಗಡೆ ಮಾಡಲಾಗುತ್ತದೆ

ರೈತರು ಸಾಕಲಾಗದ, ವಯಸ್ಸಾದ, ನಿರ್ಗತಿಕ, ಅನಾರೋಗ್ಯದಿಂದ ಬಳಲುತ್ತಿರುವ, ಅನಧಿಕೃತ ಜಾನುವಾರುಗಳ ಸಾಗಾಣಿಕೆಯಲ್ಲಿ ವಶಪಡಿಸಿಕೊಂಡ ಮತ್ತು ಬಿಡಾಡಿ ಜಾನುವಾರುಗಳನ್ನು, ಸ್ಥಳೀಯ ಪ್ರಾಧಿಕಾರ, ಪೊಲೀಸ್ ಇಲಾಖೆ, ಸಾರಿಗೆ ಇಲಾಖೆ ಹಾಗೂ ರೈತರು ಸರ್ಕಾರಿ ಗೋಶಾಲೆಗಳಿಗೆ ಜಾನುವಾರುಗಳನ್ನು ಕಳುಹಿಸಿದಲ್ಲಿ ಅಥವಾ ತಂದು ಬಿಟ್ಟಲ್ಲಿ ಅವುಗಳನ್ನು ಗೋಶಾಲೆಗಳಲ್ಲಿ ನಿರ್ವಹಣೆ ಮಾಡಲಾಗುವುದು.

ಬರಡು ಹಾಗೂ ವಯಸ್ಸಾದ ದನಗಳ ರಕ್ಷಣೆಯ ಉದ್ದೇಶ ಮತ್ತು ಅದರ ಮಹತ್ವವನ್ನು ಗಮನದಲ್ಲಿಟ್ಟುಕೊಂಡು, ಸಂಬಂಧಿಸಿದ ಹಾಲು ಒಕ್ಕೂಟಗಳು ವಾರ್ಷಿಕ ವ್ಯವಹಾರ ಯೋಜನೆಗಳನ್ನು (Business Plan) ರೂಪಿಸುವ ಸಂದರ್ಭದಲ್ಲಿ ಈ ವಿಷಯವನ್ನು ಸಂಬಂಧಿಸಿದ ಒಕ್ಕೂಟಗಳ ಆಡಳಿತ ಮಂಡಳಿ ಹಾಗೂ ಸಾಮಾನ್ಯ ಸಭೆಗಳಲ್ಲಿ ಚರ್ಚಿಸಿ ನಿಯಮಾನುಸಾರ ಪರಿಶೀಲಿಸಲಾಗುವುದು.

**ಸಂಖ್ಯೆ:ಪಸಂಮೀ 06 ಸಲೆವಿ 2026**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**